ನ್ನಾಗಲೀ ಇಲ್ಲವೇ ಸಂಬಂಧಪಟ್ಟ ಮಂತ್ರಿಗಳನ್ನಾಗಲೀ ಇಲ್ಲವೇ ಅಧಿಕಾರಿಗಳನ್ನಾಗಲೀ ನಮ್ಮ ಸರಕಾರ ಕಾಂಟ್ಯಾಕ್ಟ್ ಮಾಡಿ ಈ ಅಭಾವವನ್ನು ತಪ್ಪಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ವಿನಂತಿಸುತ್ತೇನೆ.

ಶ್ರೀ ಎಸ್. ಚಿಕ್ಕೇಗೌಡ.—ಮಾನ್ಯ ಅಧ್ಯಕ್ಷರೆ, ನಾನು ಸಹ ಇದರ ಬಗ್ಗೆ ಮಾತನಾಡುತ್ತೇನೆ.

ಅಧ್ಯಕ್ಷರು.—ತಾವು ನೋಟೀಸ್ ಕೊಟ್ಟಿದ್ದೀರಾ ?

ಶ್ರೀ ಎಸ್. ಚಿಕ್ಕೇಗೌಡ—ಇದು ವಿಶೇಷವಾಗಿರುವುದರಿಂದ ತಾವು ಅವಕಾಶ ಕೊಡಬೇಕಾಗುತ್ತದೆ

ಶ್ರೀ ಕೆ. ಲಕ್ಕಪ್ಪ.—ಈಗ ಡಿಸ್‌ಕಷನ್‌ಗೆ ಅವಕಾಶ ಮಾಡಿಕೊಡಿ, ಏಕೆಂದರೆ ಕೇಂದ್ರಸರ್ಕಾರದ ಜೊತೆಯಲ್ಲಿ ಸರಿಯಾದ ವ್ಯವಹಾರ ನಡೆದಿದೆಯೋ ಇಲ್ಲವೋ ಎನ್ನುವುದು ಗೊತ್ತಾಗಬೇಕು. ಏತ ಕ್ಕೋಸ್ಕರ ಇವರು ಕೇಂದ್ರಸರ್ಕಾರದ ಮೇಲೆ ಒತ್ತಾಯ ಹಾಕಲಿಲ್ಲ ? ಪುನಃ ಕೇಂದ್ರದ ಮೇಲೆ ಒತ್ತಾಯ ಹಾಕುವುದಕ್ಕೆ ಈ ಬಗ್ಗೆ ಚರ್ಚೆ ಮಾಡಲಿಕ್ಕೆ ತಾವು ಅವಕಾಶ ಮಾಡಿಕೊಡಿ. ರೈತರು ಬಹಳ ಕಷ್ಟದಲ್ಲಿದ್ದಾರೆ

ಶ್ರೀ ವಾಟಾಳ್ ನಾಗರಾಜ್.—ದಯಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ಇದರ ಪರಿಸ್ಥಿತಿಯ ಗಂಭೀರತೆಯನ್ನು ಅರಿತು ಇದಕ್ಕೆ ಒಂದು ವಿಶೇಷ ಚರ್ಚೆಯನ್ನು ಏರ್ಪಾಡು ಮಾಡೋಣ. ಅದು ಯಾವಾಗ ಏನು ಏನ್ನುವುದನ್ನು ತಮಗೆ ನಾನು ತಿಳಿಸುತ್ತೇನೆ.

ನಿಯಮ ೩೩ಳಿರ ಮೇರೆಗೆ

೧. ವಿಷಯ.—ಖಾಸಗಿ ಪದವಿಪೂರ್ವ ಕಾಲೇಜುಗಳ ಅಧ್ಯಾಪಕರಿಗೆ ವೇತನ ಪಾವತಿಯಲ್ಲಿ ವಿಳಂಬವಾಗುತ್ತಿರುವ ಬಗ್ಗೆ.

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಕರ್ನಾಟಕ ರಾಜ್ಯದ ಸರ್ಕಾರಿ ಪದವಿಪೂರ್ವ ಕಾಲೇಜುಗಳ ಅಧ್ಯಾಪಕರುಗಳಿಗೆ ಕ್ಲುಪ್ತ ಕಾಲದಲ್ಲಿ ಪ್ರತಿ ತಿಂಗಳು ವೇತನ ಪಾವತಿಯಾಗುತ್ತಿದ್ದರೆ, ರಾಜ್ಯದ ಖಾಸಗಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳಿಗೆ ವೇತನ ಪಾವತಿಯಲ್ಲಿ ವಿಪರೀತ ವಿಳಂಬವಾಗುತ್ತಿದೆ ಕೆಲವೊಮ್ಮೆ ನಾಲ್ಕಾರು ತಿಂಗಳುಗಳ ಕಾಲ ವೇತನವಿಲ್ಲದೆ. ಉಪನ್ಯಾಸಕರು ಮತ್ತು ಅವರನ್ನೇ ನಂಬಿದ ಅವರ ಕುಟುಂಬ ವರ್ಗದವರು ಕಷ್ಟಪಡುವಂತಾಗಿದೆ. ಅನ್ಯ ಆದಾಯ ವಿಲ್ಲದ ಶಿಕ್ಷಕ ವರ್ಗ ಇದರಿಂದಾಗಿ ಕೆಲವೊಮ್ಮೆ ಉಪವಾಸ ಬೀಳುವ ಪರಿಸ್ಥಿತಿಯು ಉಂಟಾಗಿದೆ. ರಾಜ್ಯದಲ್ಲಿ ಸರ್ಕಾರಿ ಕಾಲೇಜುಗಳ ಉಪನ್ಯಾಸಕರ ಕಣ್ಣಿಗೆ ಬೆಣ್ಣೆ, ಖಾಸಗಿ ಕಾಲೇಜು ಉಪನ್ಯಾಸಕರ ಕಣ್ಣಿಗೆ ಸುಣ್ಣ, ಎಂಬಂತಹ ನೀತಿಯಿಂದಾಗಿ ಶಿಕ್ಷಕ ವೃಂದಕ್ಕೆ ಅದ ಮನೋಕ್ಷೋಭೆಯಿಂದ ಸಹಸ್ರಾರು ಮಂದಿ ವಿದ್ಯಾರ್ಥಿಗಳು ಸಂಪರ್ಕ ಪಾಠವಿಲ್ಲದೆ ಸಂಕಟಪಡುವ ಪರಿಸ್ಥಿತಿ ಉಂಟಾಗಿದೆ. ಈ ವಿಚಾರ ವನ್ನು ಅತ್ಯಂತ ಶೀಘ್ರವಾಗಿ ಪರಿಶೀಲಿಸಿ ಪ್ರತಿ ತಿಂಗಳು ಕ್ಲುಪ್ತ ಕಾಲದಲ್ಲಿ ವೇತನ ಪಾವತಿಯಾಗುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಜಿ. ಎಸ್. ಆಚಾರ್‌ರವರು ಹೇಳಿದಂತೆ ಕೆಲವು ಖಾಸಗಿ ಪದವಿಪೂರ್ವ ಕಾಲೇಜುಗಳಲ್ಲಿ ವೇತನ ಪಾವತಿ ವಿಳಂಬವಾಗಿದೆ. ಕೆಲವು ಸಂದರ್ಭಗಳಲ್ಲಿ ವಿಳಂಬ ವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದರಿಂದ ಅವರು ಹೇಳಿದಹಾಗೆ ಸರ್ಕಾರಿ ಉಪನ್ಯಾಸಕರ ಕಣ್ಣಿಗೆ ಬೆಣ್ಣೆ, ಖಾಸಗಿ ಕಾಲೇಜುಗಳ ಉಪನ್ಯಾಸಕರುಗಳ ಕಣ್ಣಿಗೆ ಸುಣ್ಣ ಬರದಹಾಗೆ ಸರ್ಕಾರ ಎಲ್ಲ ರೀತಿಯ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತದೆ. ಕೆಲವು ಸಾರಿ ಏನಾಗುತ್ತದೆಂದರೆ, ಪರಿಪತ್ರ ಬರುವಾಗ ಸ್ವಲ್ಪ ವ್ಯತ್ಯಾಸ ಆಗುತ್ತದೆ, ಈಗ ರಿಲೀಸ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ. ಇನ್ನು ಮುಂದೆ ಯಾವುದೇ ರೀತಿಯ ಆತಂಕವಾಗದ ರೀತಿಯಲ್ಲಿ ನೋಡಿಕೊಳ್ಳುತ್ತೇವೆ.

ಅಧ್ಯಕ್ಷರು.—ಮಾನ್ಯ ಜೋಶಿಯವರೇ ತಮ್ಮ ನಿಯಮ ೩೩ಳಿನ್ನು ರೆವಿನ್ಯೂ ಮಂತ್ರಿಗಳಿಗೆ ವರ್ಗಾವಣೆ ಮಾಡಲಾಗಿದೆ. ಆದ್ದರಿಂದ ಇದನ್ನು ಇನ್ನೊಂದಂ ದಿವಸ ತೆಗೆದುಕೊಳ್ಳುತ್ತೇನೆ. ಮಾನ್ಯ ಪಿ.ಸಿ. ಸಿದ್ಧನಗೌಡರು ಈಗ ಸಭೆಯಲ್ಲಿ ಇಲ್ಲ.